

# ಪ್ರಾಚೀನರು ಕಂಡಂತೆ ಪೃಥ್ವಿ

ಸಂಪ್ರದಾಯ ಫಿಲಿಪ್ಪೀನ್ಸ್‌ನ ಬಗೋಟ ಎಂಬ ಬುಡಕಟ್ಟಿನಲ್ಲಿತ್ತು.

ಸಿಸಿಲಿಯ ಎಟ್ನಾ ಜ್ವಾಲಾಮುಖಿಯನ್ನು ಗಗನಸ್ತಂಭವೆಂದೇ ವರ್ಣಿಸಲಾಗಿದೆ. ಮಹಾಕವಿ ಹೋಮರ್‌ನ 'ಒಡಿಸ್ಸಿ'ಯಲ್ಲಿ ಬರುವ ಸೈಕ್ಲೋಪ್ ಮತ್ತು ಟೈಟಾನರ ವರ್ಣನೆಗೆ ಆ ದೇಶದ ಜ್ವಾಲಾಮುಖಿಗಳೇ ಪ್ರೇರಣೆಕೊಟ್ಟಿವೆ. ಸೈಕ್ಲೋಪ್ ಒಕ್ಕಣ್ಣ ರಾಕ್ಷಸ, ಜ್ವಾಲಾಮುಖಿಯ ತಳದಲ್ಲಿ ಕೂತು ಜೋವ್ ಅಂದರೆ ಜ್ಯುಪಿಟರ್‌ಗೆ ಸಿಡಿಲು ಹುಟ್ಟಿಸುವುದರಲ್ಲಿ ಸಹಾಯ ಮಾಡುತ್ತಿದ್ದನಂತೆ. ಈ ಕಮ್ಮಾರನನ್ನು ರೋಮನ್ನರು ವಲ್ಕಾನ್ ಎಂದರು. ವಲ್ಕಾನ್, ಜ್ಯುಪಿಟರ್ ಮತ್ತು ಜೂನೋ ಇವರ ಮಗನಂತೆ. ಅವನನ್ನು ಸ್ವರ್ಗದಿಂದ ಎಸೆದಾಗ ವಲ್ಕಾನ್ ಹೆಳವನಾದ, ಇಟಲಿಯ ಜ್ವಾಲಾಮುಖಿಯೊಂದರಲ್ಲಿ ಬಿದ್ದ. ಅವನ ಕಮ್ಮಟದ ಕುಲುಮೆಯಿಂದ ಹೊರಬರುವ ಬೆಂಕಿಗೆ ಈ ಹಿನ್ನೆಲೆಯನ್ನು ಕಲ್ಪಿಸಿದ್ದಾರೆ. ಈಗಲೂ ಆಗಸ್ಟ್ 23ನೆಯ ದಿನ ವಲ್ಕಾನನನ್ನು ಪೂಜಿಸಲು ಇಟಲಿಯಲ್ಲಿ ವಿಶೇಷ ಹಬ್ಬ ಆಚರಿಸಲಾಗುತ್ತದೆ. ಬೆಂಕಿಯಿಂದ ರಕ್ಷಿಸಲು ಪ್ರಾರ್ಥನೆ ಸಲ್ಲಿಸುತ್ತಾರೆ.

## ವೇದ ವಾಙ್ಮಯದಲ್ಲಿ ಭೂಮಿ

ಖಚಿತತೆಯ ದೃಷ್ಟಿಯಿಂದ ಪುರಾಣಗಳನ್ನು ಗಂಭೀರವಾಗಿ ಪರಿಗಣಿಸುವುದು ಕಡಿಮೆ. ಪುರಾಣಗಳನ್ನು ರಚಿಸುವಾಗ ಇದ್ದ ಧರ್ಮ ಸಂಘರ್ಷಗಳನ್ನು ಕೂಡ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದರೆ ವೇದಗಳ ಬಗ್ಗೆ ಈ ಮಾತುಗಳನ್ನು ಹೇಳಲು ಸಾಧ್ಯವಿಲ್ಲ. ವೇದಗಳನ್ನು ಪ್ರಮಾಣಗ್ರಂಥಗಳು ಎಂದೇ ಭಾರತೀಯರು ಭಾವಿಸಿದ್ದಾರೆ. ಅದರಲ್ಲಿ ಹೇಳಿರುವುದೇ ಅಂತಿಮ ಎಂಬ ಮನಸ್ಥಿತಿಯೂ ಉಂಟು. ಅದೇನೇ ಇರಲಿ, ವೇದ ರಚನೆಯ ಕಾಲಕ್ಕೆ ಪ್ರಕೃತಿಗೂ ಮನುಷ್ಯನಿಗೂ ಇರುವ ನಂಟು ಗಾಢವಾಗಿತ್ತು ಎಂಬುದನ್ನು ಋಗ್ವೇದವೇ ಸಾರುತ್ತದೆ. ಪ್ರಕೃತಿಯ ಕೃಪೆಯಿಂದಲೇ ನಮ್ಮ ಬದುಕು ಎಂಬುದು ಸಮಾಜಕ್ಕೆ ಅರ್ಥವಾಗಿತ್ತು. ಏಕೆಂದರೆ ವೇದ ರಚಿಸುವ ಕಾಲಕ್ಕೆ (ಅಂದಾಜು ಕ್ರಿ.ಪೂ. 1600) ಅಲೆಮಾರಿಯಾಗಿದ್ದ ಮನುಷ್ಯ ಒಂದೆಡೆ ನೆಲೆ ನಿಂತಿದ್ದ. ಕೃಷಿಯುಗ ಪ್ರಾರಂಭವಾಗಿ ಆರೇಳು ಸಾವಿರ ವರ್ಷಗಳೇ ಆಗಿದ್ದವು. ಭೂಮಿ ಇಲ್ಲದೆ ಕೃಷಿ ಎಂತು? ಭೂಮಿಯೇ ಸರ್ವಸ್ವ. ಇತರ ಜೀವಿಗಳೊಡನೆ ಮನುಷ್ಯ ಬದುಕು ಹಂಚಿಕೊಂಡಿದ್ದ ಎಂಬ ಸತ್ಯ ಆಗಲೇ ಗೋಚರಿಸಿತ್ತು. ಭೂಸಂಪತ್ತನ್ನು ಪಡೆಯಲು, ರೋಗಾದಿಗಳಿಂದ ಬಾಧೆ ಆಗದಂತೆ ಇರಲು ಗೋವುಗಳನ್ನು ನೀಡು ಎಂದು, ಶತ್ರುಗಳಿಂದ ಆಕ್ರಮಣವಾಗದಿರಲಿ ಎಂದು ಪ್ರಾರ್ಥಿಸಿರುವ ಋಕ್ಕುಗಳೇ ಋಗ್ವೇದದಲ್ಲಿ ಪ್ರಧಾನ. ಕೃಷಿಪ್ರಧಾನವಾದ ಕಾಲಘಟ್ಟದಲ್ಲಿ ವೇದಕಾಲೀನ